**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 81/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ದಾಶರತಿ ಚೌದರಿ |
| ತಂದೆಯ ಹೆಸರು | : | ದೊರೆಸ್ವಾಮಿ ನಾಯ್ಡು |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಬೆಂಗಳೂರು. |

**ಸಾಕ್ಷಿಯನ್ನು ದಿನಾಂಕಃ 19.08.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಆರೋಪಿಗಳು ನೋಡಿ ಪರಿಚಯವಿರುತ್ತಾರೆ. ಚಾಸಾ-1 ನನಗೆ ಸ್ನೇಹಿತರಾಗಬೇಕು. ಚಾಸಾ-3 ನಮ್ಮ ಜಮೀನಿನ ಕೆಲಸಗಳನ್ನು ನೋಡಿಕೊಳ್ಳುತ್ತಾರೆ. ನಾನು ಮತ್ತು ಚಾಸಾ-1 ದಿನಾಂಕಃ 19.06.2020 ರಂದು ಬೆಳಿಗ್ಗೆ 10.45 ಗಂಟೆ ಸಮಯದಲ್ಲಿ ನಾನು ವ್ಯವಸಾಯ ಮಾಡಿಸುತ್ತಿದ್ದಾಗ ಆರೋಪಿಗಳು ನಮ್ಮ ಜಮೀನಿಗೆ ಆಕ್ರಮ ಪ್ರವೇಶ ಮಾಡಿ 1 ಮತ್ತು 3 ನೇ ಆರೋಪಿಗಳು ನಮ್ಮನ್ನು ಅಡ್ಡಗಟ್ಟಿ, ನಮ್ಮನ್ನು ಮತ್ತು ನಮ್ಮ ಕೆಲಸದಾಳುಗಳನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆ ಸಂದರ್ಭದಲ್ಲಿ ಚಾಸಾ-4 ರಿಂದ ಚಾಸಾ-7 ರವರು ಗಲಾಟೆ ಬಿಡಿಸಿರುತ್ತಾರೆ. ಏಕೆ ತೊಂದರೆ ಕೊಡುತ್ತೀರಾ ಎಂದು ಕೇಳಿದಾಗ ಆರೋಪಿಗಳು ನಿಮ್ಮನ್ನು ಮುಗಿಸುತ್ತೇನೆಂದು ಹೇಳಿರುತ್ತಾರೆ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ

ನೀಡಿರುತ್ತೇನೆ. ಈಗ ನನಗೆ ತೋರಿಸುತ್ತಿರುವ ದಿನಾಂಕಃ 25.06.2020 ರ ಸ್ಥಳ ಮಹಜರ್ ಗೆ ನಮ್ಮ ಜಮೀನಿನಲ್ಲಿರುವ ತೋಟದ ಮನೆಯ ಹತ್ತಿರ ಸಹಿ ಹಾಕಿರುತ್ತೇನೆ. ಸಾಕ್ಷಿಯು ಸ್ಥಳ ಮಹಜರ್ ನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿ.ಪಿ.-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.-2(ಎ) ಎಂದು ಗುರುತಿಸಲಾಯಿತು. ಆ ದಿವಸ ಚಾಸಾ-4 ಮತ್ತು ಚಾಸಾ-5 ಇದ್ದರು.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಡಿ.ಆರ್.ಎಂ. ವಕೀಲರಿಂದಃ**

ಬನವಾಡಿ ಗ್ರಾಮದಲ್ಲಿರುವ ಸ.ನಂ. ನಲ್ಲಿ 08 ಎಕರೆ ಜಮೀನು ಇದ್ದು, ಅದರ ಪೈಕಿ 04 ಎಕರೆ ಜಮೀನನ್ನು ಮಾರಾಟ ಮಾಡಿರುತ್ತೇನೆ. ಸ.ನಂ. 16/8 ರ ಜಮೀನನ್ನು ಎಂ.ಎಲ್. ಹಾಲಪ್ಪರವರಿಂದ ಖರೀದಿಸಿರುತ್ತೇನೆ. ಚಾಸಾ-1 ನನ್ನ ಕಡೆಯಿಂದ ಯಾವುದೇ ಜಮೀನನ್ನು ಕ್ರಯಕ್ಕೆ ಪಡೆದುಕೊಂಡಿಲ್ಲ. ಸ.ನಂ. 16/45 ರಲ್ಲಿರುವ 05 ಎಕರೆ ಜಮೀನಿನಲ್ಲಿ, ಸ.ನಂ. 16/8 ಮತ್ತು ಸ.ನಂ. 16/9 ರಲ್ಲಿರುವ 04 ಎಕರೆ ಜಮೀನಿನಲ್ಲಿ ಚಾಸಾ-1 ವ್ಯವಸಾಯ ಮಾಡುತ್ತಿದ್ದಾರೆ. ಪಹಣಿ ಪತ್ರಿಕೆಗಳಲ್ಲಿ ಚಾಸಾ-1 ರವರ ಹೆಸರು ನಮೂದಾಗಿಲ್ಲ. ಚಾಸಾ-1 ರವರ ಹೆಸರಿನಲ್ಲಿರುವ ಮುಖ್ತ್ಯಾರ್ ನಾಮೆಗೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ. ಚಾಸಾ-1 ರವರ ಹೆಸರಿನಲ್ಲಿರುವ ನೋಂದಾಯಿತ ದಾಖಲೆಗಳನ್ನು ನೋಡಿರುತ್ತೀರಾ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಚಾಸಾ-1 ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದೇವೆಂದರೆ ಸರಿ. ಸ.ನಂ. 16/8 ರಲ್ಲಿ ನನ್ನ ಹೆಸರಿನಾಲ್ಲಾಗಲೀ ಅಥವಾ ಚಾಸಾ-1 ರವರ ಹೆಸರಿನಾಲ್ಲಾಗಲೀ ಯಾವುದೇ ದಾಖಲೆಗಳು ಇರುವುದಿಲ್ಲವೆಂದರೆ

ಸರಿಯಲ್ಲ. ಆರೋಪಿಗಳಿಗು ಬನವಾಡಿ ಗ್ರಾಮದಲ್ಲಿ ಜಮೀನು ಇರುತ್ತವೆಂದರೆ ನಮ್ಮ ಜಮೀನಿನ ಅಕ್ಕ-ಪಕ್ಕದಲ್ಲಿರುವುದಿಲ್ಲ. ಆರೋಪಿಗಳು ನಮ್ಮ ವಿರುದ್ಧ ಮೂಲ ದಾವೆ ಸಂಖ್ಯೆ 68/2020 ಮತ್ತು 70/2020 ರಂತೆ ದಾವೆ ಸಲ್ಲಿಸಿರುತ್ತಾರೆಂದರೆ ಸರಿ. ನಾವು ಆರೋಪಿಗಳ ಜಮೀನಿಗೆ ಆಕ್ರಮ ಪ್ರವೇಶ ಮಾಡಿ ತೊಂದರೆ ಕೊಟ್ಟಿದ್ದರಿಂದ ಆರೋಪಿಗಳು ಹೆಚ್.ಡಿ. ಕೋಟೆ ಪೋಲೀಸ್ ಠಾಣೆಗೆ ದೂರು ನೀಡಿದ್ದರು ಎಂದರೆ ಈ ರೀತಿ ದೂರು ಕೊಟ್ಟಿರುತ್ತಾರೆಂದು ಪೋಲೀಸ್ ಠಾಣೆಯಿಂದ ದೂರವಾಣಿ ಕರೆ ಬಂದಿದ್ದು ನಂತರ ನಾವು ಠಾಣೆಗೆ ಹೋಗಿ ದಾಖಲೆ ಕೊಟ್ಟಿರುತ್ತೇವೆ. ನಂತರ ಪೋಲೀಸ್ ಠಾಣೆಯಲ್ಲಿ ಆರೋಪಿಗಳ ಜಮೀನಿಗೆ ತೊಂದರೆ ಕೊಡುವುದಿಲ್ಲವೆಂದು ಮುಚ್ಚಳಿಕೆ ಬರೆದುಕೊಟ್ಟಿರುತ್ತೇನೆಂದರೆ ಸರಿಯಲ್ಲ. ಆರೋಪಿಗಳು ಯಾವುದೇ ರೀತಿಯಲ್ಲು ನಮ್ಮ ಜಮೀನಿಗೆ ಬಂದು ಆಕ್ರಮ ಪ್ರವೇಶ ಮಾಡಿಲ್ಲ ಮತ್ತು ಯಾವುದೇ ರೀತಿ ಅಡ್ಡಗಟ್ಟಿಲ್ಲ ಹಾಗು ಯಾವುದೇ ಜೀವ ಬೆದರಿಕೆ ಹಾಕಿರುವುದಿಲ್ಲವೆಂದರೆ ಸರಿಯಲ್ಲ. ಬನವಾಡಿ ಗ್ರಾಮದಲ್ಲಿರುವ ಸ.ನಂ. 16 ರಲ್ಲಿ ಸುಮಾರು 870 ಎಕರೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ಹಲವಾರು ಜನರು ಸಾಗುವಳಿಗಾಗಿ ಅರ್ಜಿ ಸಲ್ಲಿಸಿ, ನಂತರ ಸಾಗುವಳಿ ಪತ್ರ ಪಡೆದು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆಂದರೆ ಸರಿ. ನಮಗೆ ಕ್ರಯವಾಗಿರುತ್ತವೆ ಎಂದು ಹೇಳಿದ ಜಮೀನು ಬನವಾಡಿ ಗ್ರಾಮದ ಸ.ನಂ. 16/18 ರಲ್ಲಿ ಇರುವುದಿಲ್ಲವೆಂದರೆ ಸರಿಯಲ್ಲ. ಆರೋಪಿಗಳು ನಮ್ಮ ಜಮೀನಿಗೆ ಬಂದಾಗ ಸುಮಾರು 10 ಜನ ಕೆಲಸ ಮಾಡುತ್ತಿದ್ದರು. ಆರೋಪಿಗಳು ನನ್ನನ್ನು ಮತ್ತು ಚಾಸಾ-1 ರವರನ್ನು ಅಡ್ಡಗಟ್ಟಿ

ಕೆಲಸದಾಳುಗಳಿಗೆ ಕೆಲಸ ಮಾಡಬಾರದು ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ಗಲಾಟೆ ನಡೆದಿರುತ್ತದೆಂದು ಹೇಳಿದ ಸ.ನಂ. ಜಮೀನನ್ನು ನಾನು ಮತ್ತು ನನ್ನ ಸಹೋದರ ಸೇರಿ ಚನ್ನೇಗೌಡ ಮತ್ತು ವಿಜಯಕುಮಾರ್ ಎಂಬುವವರಿಗೆ ಮಾರಾಟ ಮಾಡಿರುತ್ತೇನೆ. ಸಾಮಾನ್ಯವಾಗಿ ಒಂದು ಬಾರಿ ಕ್ರಯ ಪತ್ರ ಮಾಡಿಕೊಟ್ಟ ನಂತರ ಅದರ ಹಕ್ಕು ಮತ್ತು ಸ್ವಾಧೀನವನ್ನು ಕಳೆದುಕೊಳ್ಳುತ್ತೇವೆಂದರೆ ಸರಿ. ನಾನು ಹೇಳಿರುವಂತೆ ಯಾವುದೇ ಗಲಾಟೆ ನಡೆದಿಲ್ಲ ಮತ್ತು ನನಗಾಗಲೀ ಅಥವಾ ಚಾಸಾ-1 ರವರಿಗಾಗಲೀ ಸದರಿ ಜಮೀನಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ. ಪೋಲೀಸರು ಸ್ಥಳಕ್ಕೆ ಬಂದು ಯಾವುದೇ ಮಹಜರ್ ಮಾಡಿಲ್ಲ ಮತ್ತು ಮಹಜರ್ ನ್ನು ಠಾಣೆಯಲ್ಲಿಯೇ ಕುಳಿತು ಸೃಷ್ಟಿಸಿರುತ್ತಾರೆಂದರೆ ಸರಿಯಲ್ಲ.

<u>**ಮರು ವಿಚಾರಣೆ: ಇರುವುದಿಲ್ಲ**.</u>

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**